

'ನನ್ನ ಕತೇಲಿ ಹೇಳ್ಲಿಲ್ವಾ, ಆ ಕುಸ್ತಿಪಟೂನೆ ತಲೆ ಮೇಲೆ ಇಟ್ಟುಕೊಂಡು ತೆಗೆದುಕೊಂಡು ಹೋಗಿರಬೇಕು' ಎಂದು ಅರುಣಾ ನಾಟಕೀಯವಾಗಿ ಹೇಳಿ, ಅನಿತಾಳ ಆತಂಕದ ದನಿಯಲ್ಲಿ ತಾನೂ ಸೇರಿ 'ಅಯ್ಯಯ್ಯೋ...' ಎಂದಳು.

'ಯಾರೋ ಚಾಮುಂಡಿ ಬೆಟ್ಟಾನ ಎತ್ಕೊಂಡು ಹೋಗಿದ್ದಾರೆ!'

ಇವರ ಕೂಗಿಗೆ ಮನೆಯಲ್ಲಿದ್ದ ಎಲ್ಲರೂ ಗಾಬರಿಗೊಂಡು ದಡದಡ ತಾರಸಿಗೆ ಓಡಿ ಬಂದರು.

'ಚಾಮುಂಡಿ ಬೆಟ್ಟ ಎಲ್ಲಿ? ಯಾರೋ ತೆಗೆದುಕೊಂಡು ಹೋಗಿಬಿಟ್ಟದ್ದಾರೆ?' ಅನಿತಾಳ ದೂರು ದೊಡ್ಡದಾಗಿಯೇ ಇತ್ತು.

ತಾತ ಗೊಣಗಿದರು. 'ಏ ನಾನೇನೋ ಅಂದ್ಕೊಂಡೆ. ಮೊದಲೇ ಚಳಿ... ಇಷ್ಟರ ಮೇಲೆ ನನ್ನ ನಿದ್ದೆ ಕೆಡಿಸಿದ್ರಿ' ಅಂತ ಅಂದು ತಾರಸಿ ಇಳಿದು ಹೋದರು.

ಕೈಯಲ್ಲಿ ಸೌಟು ಹಿಡಿದುಕೊಂಡೇ ಬಂದ ಅನಿತಾಳ ಅಮ್ಮನಿಗೆ ಸ್ವಲ್ಪ ಸಿಟ್ಟೇ ಬಂದಿತು. 'ನಿನಗೂ ನಿನ್ನ ಚಿಕ್ಕಮ್ಮನಿಗೂ ಬೇರೆ ಕೆಲಸ ಇಲ್ಲ. ಬರೀ ಇಷ್ಟೆ ತಲೆಹರಟೆ. ನನಗೆ ಕೆಲಸ ಇದೆ' ಎಂದು ಹೋದರು.

ಅಜ್ಜಿ ಸ್ವಲ್ಪ ಗಂಭೀರವಾಗಿ 'ಅನಿತಾ, ಅರುಣಾ ನಿಮ್ಮಿಬ್ರಿಗೂ ಈಗ ಒಂದೇ ಕೆಲಸ! ಈಗ ಇಬ್ರೂ ಸೇರಿ ಬೆಟ್ಟಾನ ಹುಡುಕಿ ಕೊಡಿ. ನಮಗೂ ಬೆಟ್ಟ ಬೇಕು' ಎಂದು ಹೇಳಿ ಕಿರುನಗುತ್ತಾ ಹೋದರು.

ಅನಿತಾಗೆ ನಿಜವಾಗಿಯೂ ಆತಂಕವಾಗಿತ್ತು. ಅರುಣಾ ಕೂಡಾ 'ಅಯ್ಯಯ್ಯೋ ಏನು ಮಾಡೋದಪ್ಪಾ ಈಗ?' ಅಂತಾ ಇನ್ನೂ ಹೇಳ್ತಾನೇ ಇದ್ದಳು.

ನಿಧಾನವಾಗಿ ಸೂರ್ಯ ಮೇಲೇಳುತ್ತಿದ್ದಂತೆ ಬೆಟ್ಟವನ್ನು ಮುಸುಕಿದ್ದ ಕಾವಳ ಕರಗತೊಡಗಿತು. ಬೆಟ್ಟದ ಮೇಲಿನ ಟೆಲಿಫೋನ್ ಪ್ರಸಾರ ಗೋಪುರ ಮೊದಲು ಕಾಣಿಸಿತು. ದೇವಸ್ಥಾನದ ಗೋಪುರ ಕಂಡಿತು. ಆಮೇಲೆ ಅರಮನೆ ಕಣ್ಣಿಗೆ ಬಿತ್ತು. ಸುತ್ತಮುತ್ತಲ ಮರಗಳು ಕಾಣಿಸಿತು. ಆಮೇಲೆ ಬೆಟ್ಟದ ಬಂಡೆಗಳು ಒಂದೊಂದಾಗಿ ಕಾಣತೊಡಗಿತು. ಹೀಗೆ ಒಂದೊಂದೂ ಕಾಣುತ್ತಿದ್ದಂತೆಯೇ ಅನಿತಾ ಖುಷಿಯಿಂದ ಚಪ್ಪಾಳೆ ತಟ್ಟಿ ಕುಣಿದಳು. ಕುಣಿಯುತ್ತಲೇ ಇದ್ದಳು.

'ಬೆಟ್ಟ ಸಿಕ್ಕಿತು. ಬೆಟ್ಟ ಸಿಕ್ಕಿತು...' ಎನ್ನುವ ಅವಳ ಆನಂದದ ಕೂಗಿಗೆ ಸುತ್ತಮುತ್ತಲ ಹಕ್ಕಿಗಳೂ ದನಿಗೂಡಿಸಿದಂತೆ ಕೇಳುತ್ತಿತ್ತು.

ಅವಳ ಖುಷಿಯಲ್ಲಿ ಅರುಣಾ ಚಿಕ್ಕಮ್ಮ ಕೂಡಾ ಸೇರಿಕೊಂಡಳು.

ಅವರ ಸಂತೋಷದಲ್ಲಿ ನಾವೂ ನೀವೂ ಸೇರಿಕೊಳ್ಳೋಣವೇ? ●